ಡಾ ಹೆಚ್.ಡಿ. ಲಮಾಣಿ:- ಇದರ ಬಗ್ಗೆ ಚರ್ಚೆಮಾಡಿ ಏನಾದರೂ ಒಂದು ನಿರ್ಣಯ ತೆಗೆದುಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತೇನೆ. ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಕಾನೂನು ಚೌಕಟ್ಟಿಗೆ ಬೆಂಕಿ ಹಚ್ಚುತ್ತಾ ಇದ್ದೀರಿ. ಅದರ ಕಲ್ಪನೆ ನಿಮಗೆ ಇಲ್ಲ. ಇನ್ನಾದರೂ ಕಾನೂನಿಗೆ ಗೌರವ ಕೊಡುವುದನ್ನು ಕಲಿಯಿರಿ ಎಂದು ಅವರಿಗೆ ಹೇಳಿದ್ದುದು.

ಶ್ರೀ ಕೆ.ಎಸ್. ಈಶ್ವರಪ್ಪ:- ಕಾನೂನಿಗೆ ತಿದ್ದುಪಡಿಯನ್ನು ತನ್ನಿ, ಅಶ್ವಾಸನೆ ಬಿಡಿ. ಅವರಿಗೆ ಅನ್ನೆ ಕೊಡಿ. ನಾನು ಇಷ್ಟೇ ಕೇಳುವುದು, ಇನ್ನೇನೂ ಕೇಳುವುದಿಲ್ಲ.

ವಿಷಯ: ಸರ್ಕಾರದ ಇತ್ತೀಚಿನ ಕಾರ್ಯನೀತಿಯಿಂದಾಗಿ ಗೃಹ ನಿರ್ಮಾಣ ಸಹಕಾರ ಸಂಘಗಳ ನಿವೇಶನರಹಿತ ಸಾವಿರಾರು ಸದಸ್ಯರುಗಳಿಗೆ ತೊಂದರೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ):- ಮಾನ್ಯ ಅಧ್ಯಕ್ಷರೆ, ಪ್ರಸ್ತುತ ಸರ್ಕಾರದ ನೀತಿಯಿಂದಾಗಿ ಬೆಂಗಳೂರಿನ ನಾಗರೀಕರಿಗೆ ನಿವೇಶನಗಳನ್ನು ಕೊಡತಕ್ಕದ್ದಕ್ಕೆ ತೊಂದರೆಯಾಗಿದ್ದು, ಸಹಕಾರ ಸಂಘಗಳ ಪತಿಯಿಂದ ಮಾಡತಕ್ಕದ್ದನ್ನು ಬಿ.ಡಿ.ಎ. ಮೂಲಕ ಹಂಚಿಕೆ ಮಾಡಬೇಕೆಂದು ರಾಜ್ಯಸರ್ಕಾರ ತೀರ್ಮಾನಿಸಿರುವುದರಿಂದ ಆಗಿರತಕ್ಕಂಥ ತೊಂದರೆ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

* ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಯವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಉತ್ತರವನ್ನು ಕೊಡಲು ಬಯಸುತ್ತೇನೆ.

ನೈಜ ಸದಸ್ಯರಿಗೆ ನಿವೇಶನಗಳನ್ನು ಒದಗಿಸುವುದು ಸಹಕಾರ ಸಂಘಗಳ ಉದ್ದೇಶವಾಗಿದ್ದರೂ ದುರದೃಷ್ಟವಶಾತ್ ಕೆಲವು ಸಂಘಗಳು ಕೆಲಸ ಮಾಡಿರುವ ರೀತಿಯಿಂದಾಗಿ ನಿವೇಶನದ ನೈಜ ಅಗತ್ಯವಿರುವವರಿಗೆ ಹೆಚ್ಚಿನ ತೊಂದರೆಯುಂಟಾಗಿ ನೀತಿಬಾಹಿರಶಕ್ತಿಗಳಿಗೆ ಉತ್ತೇಜನ ದೊರಕುತ್ತಿದ್ದುದರಿಂದ ಸಹಕಾರ ಸಂಘಗಳಲ್ಲಿನ ನೈಜ ಸದಸ್ಯರ ಹಿತಾಸಕ್ತಿಗಳನ್ನು ರಕ್ಷಿಸುವ ಏಕ ಮಾತ್ರ ಉದ್ದೇಶದಿಂದ ಸರ್ಕಾರವು ದಿನಾಂಕ ೮-೧೧-೭೬ರಂದು ಎರಡೂ ಸದನಗಳಲ್ಲಿ ಬೆಂಗಳೂರು ನಗರದಲ್ಲಿನ ಗೃಹ ನಿರ್ಮಾಣ ಸಹಕಾರ ಸಂಘಗಳ ಚಟುವಟಿಕೆಗಳ ಬಗ್ಗೆ ಹೇಳಿಕೆ ನೀಡಿತ್ತು.

ಅದರಂತೆ ಗೃಹ ನಿರ್ಮಾಣ ಸಹಕಾರ ಸಂಘಗಳ ಪರವಾಗಿ ಸ್ವಾಧೀನ ಪಡಿಸಿಕೊಂಡಿದ್ದ ಹಾಗೂ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದ್ದ ಎಲ್ಲ ಜಮೀನುಗಳನ್ನು ನೈಜ ಸದಸ್ಯರ ಹಿತದೃಷ್ಟಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿಕೊಟ್ಟು ಅದರ ಮೂಲಕ ಉನ್ನತ ಮಟ್ಟದ ಸಮಿತಿಯು ಗುರುತಿಸುವ ನೈಜ ಸದಸ್ಯರಿಗೆ ನಿವೇಶನಗಳನ್ನು ಹಂಚಲು ಉದ್ದೇಶಿಲಾಗಿದೆ. ನೈಜ ಸದಸ್ಯರಿಗೆ ಸಲ್ಲಬೇಕಾದ ನಿವೇಶನಗಳು ಇತರರ ವಶವಾಗುವುದನ್ನು ತಡೆಯುವ ಸದುದ್ದೇಶದಿಂದ ಸಂಘಗಳಿಗೆ ಈಗಾಗಲೇ ನೀಡಿರುವ ಜಮೀನುಗಳನ್ನು ಸಹ ವಾಪಸ್ಸು ಸರ್ಕಾರದ ವಶಕ್ಕೆ ಪಡೆಯುವುದು ಅನಿವಾರ್ಯವಾಗಿರುತ್ತದೆ. ಇದರಿಂದ ನಿವೇಶನ ರಹಿತ ಸದಸ್ಯರಿಗೆ ಅನಾನುಕೂಲವಾಗಲಿ, ತೊಂದರೆಯಾಗಲಿ ಉಂಟಾಗುವುದೆಂಬ ಯಾವುದೇ ಶಂಕೆ ಪಡುವುದು ಬೇಡ, ನೈಜ ಸದಸ್ಯರಿಗೆ ವಂಚನೆಯಾಗಿ ನೀತಿಬಾಹಿರ ಶಕ್ತಿಗಳು ನಿವೇಶನಗಳನ್ನು ದೊರಕಿಸಿಕೊಂಡು ಹೋಗುವುದನ್ನು ತಡೆದು ಪಟ್ಟಭದ್ರಹಿತಾಸಕ್ತಿಗಳಿಂದ ಸಾಮಾನ್ಯ ಹಾಗೂ ಬಡಜನಗಳ ಶೋಷಣೆಯನ್ನು ಕೊನೆಗೊಳಿಸಲು ಸರ್ಕಾರವು ಈ ತೀರ್ಮಾನ ಕೈಗೊಂಡಿದ್ದು ಇದನ್ನು ಪುನರ್ಪರಿಶೀಲಿಸುವ ಅವಶ್ಯಕತೆ ಕಂಡುಬರುವುದಿಲ್ಲ.

(ಶ್ರೀ ಜಿ.ಎಸ್. ಆಚಾರ್ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

* ಶ್ರೀ ಜಿ. ಪುಟ್ಟಸ್ವಾಮಿಗೌಡ:- ಸನ್ಮಾನ್ಯ ಅಧ್ಯಕ್ಷರೇ, ನೈಜ ಸದಸ್ಯರಿಗೆ ತೊಂದರೆಯಾಗುತ್ತದೆ ಎನ್ನುವ ಏಕಮೇವ ಉದ್ದೇಶದಿಂದ ಈ ವ್ಯವಸ್ಥೆಯನ್ನು ಮಾಡಿದ್ದೇವೆ ಎಂದು ಸರ್ಕಾರದವರು ಹೇಳಿದ್ದಾರೆ. ಈಗಾಗಲೇ ಇದರ ಬಗ್ಗೆ ಶ್ರೀ ಕೆ.ಎಚ್. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಉಪಸಮಿತಿಯನ್ನು ಮಾಡಿ ಯಾವ ಬೇನಾಮಿ ನಿವೇಶನಗಳನ್ನು ಪಡೆಯುವವರಿದ್ದಾರೆ, ಅವರನ್ನೆಲ್ಲ ಹೊರತುಪಡಿಸಿ ಸರಿಯಾಗಿ ಕೆಲಸ ಮಾಡತಕ್ಕಂಥ ಸಹಕಾರ ಸಂಘಗಳಿಗೆ ಒತ್ತನ್ನು ಕೊಟ್ಟು ವ್ಯವಸ್ಥಿತವಾದ ರೀತಿಯಲ್ಲಿ ಇದನ್ನು ಮಾಡಬೇಕೆಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿರುವ ಹಿನ್ನಲೆಯಲ್ಲಿ, ತದನಂತರ ಬಂದ ಶ್ರೀ ವೀರಪ್ಪ ಮೊಯಿಲಿಯವರ ನೇತೃತ್ವದ ಉಪಸಮಿತಿಯ ವರದಿಯನ್ನು ಅಧರಿಸಿ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡು ಈಗಾಗಲೇ ೩೮ ಸಹಕಾರ ಸಂಘಗಳಿಗೆ ಜಮೀನನ್ನು ಕೊಡಲಾಗಿದೆ. ಈ ಸೊಸೈಟಿಗಳವರು ಈಗಾಗಲೇ ಸರ್ಕಾರಕ್ಕೆ ಹಣವನ್ನು ತುಂಬಿದ್ದಾರೆ. ಕೆಲವೊಂದು ಸೊಸೈಟಿಗಳವರು ಬಿ.ಡಿ.ಎ.ಗಿಂತಲೂ ಹೆಚ್ಚು ಕೆಲಸ ಮಾಡತಕ್ಕಂಥ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರೆ. ಇಂಥಾದ್ದನ್ನು ನೀವು ಪುನರ್ ಪರಿಶೀಲನೆ ಮಾಡಿ ಬಿ.ಡಿ.ಎ. ಮೂಲಕ ಮಾಡುವುದಾದಾಗ ಸಧ್ಯಕ್ಕೆ ನಿವೇಶನದಾರರಿಗೆ ನಿವೇಶನಗಳನ್ನು ಕೊಡುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ. ಸರ್ಕಾರ ಈಗಾಗಲೆ ತೆಗೆದುಕೊಂಡ ತೀರ್ಮಾನದಂತೆ ಅವರಿಗೇ ಕೊಟ್ಟು ನಿವೇಶನಗಳನ್ನು ಹಂಚುವಂತೆ ಮಾಡತಕ್ಕದ್ದು ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡಲು ಇಚ್ಚಿಸುತ್ತೇನೆ. ಸರ್ಕಾರ ಇದನ್ನು ಪುನರ್‌ಪರಿಶೀಲಿಸುತ್ತದೆಯೆ? ಮತ್ತು ಭೂಸ್ವಾಧೀನವನ್ನು ಮಾಡತಕ್ಕಂಥ ಈ ಕಾಯದೆ ಕೇಂದ್ರಸರ್ಕಾರದ ಕಾಯಿದೆ. ಅದರ ಪ್ರಕಾರ ಸೊಸೈಟಿಗಳ ಹೆಸರಿನಲ್ಲಿ ಈಗಾಗಲೆ ಭೂಮಿಯನ್ನು ಅಕ್ವೈರ್ ಮಾಡಲಾಗಿದೆ. ಅದನ್ನು ಈಗ ಬಿ.ಡಿ.ಎ. ವಶಪಡಿಸಿಕೊಳ್ಳುವುದಕ್ಕೆ ರಾಜ್ಯಸರ್ಕಾರಕ್ಕೆ ಕಷ್ಟವಾಗಬಹುದೆಂದು ನಾನು ಸಲಹೆಯನ್ನು ಕೊಡುತ್ತಿದ್ದೇನೆ. ಏನಾಕಾರಣ ಡಿಲೇಯಾಗುವುದನ್ನು ತಪ್ಪಿಸುವ ದೃಷ್ಟಿಯಿಂದ ಕೆ.ಎಚ್. ಪಾಟೀಲರ ವರದಿಯನ್ನು ಆಧರಿಸಿ ತೀರ್ಮಾನ ತಗೆದುಕೊಳ್ಳುವುದಕ್ಕೆ ಸರ್ಕಾರ ಪುನರ್ ಪರಿಶೀಲನೆ ಮಾಡುತ್ತದೆಯೆ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಈ ಕೆ.ಎಚ್. ಪಾಟೀಲ್ ಸಮಿತಿ ಏನು ವರದಿಯನ್ನು ಕೊಟ್ಟಿದೆಯೋ, ಶ್ರೀ ವೀರಪ್ಪ ಮೊಯಿಲಿ ಉಪಸಮಿತಿ ಏನು ವರದಿಯನ್ನು ಕೊಟ್ಟಿದೆ, ಇದನ್ನೆಲ್ಲ ದಿನಾಂಕ ೬.೧೨.೩೨ರಂದು ರಾಜ್ಯ ಕ್ಯಾಬಿನೆಟ್ ಪರಿಶೀಲನೆ ಮಾಡಿ ತೀರ್ಮಾನಕ್ಕೆ ಬಂದಿತು. ಇದರ ಉದ್ದೇಶ ಏನೆಂದರೆ, ಕಳೆದ ಎಂಟು-ಹತ್ತು ವರ್ಷಗಳಿಂದ ಈ ಗೃಹ ನಿರ್ಮಾಣ ಸಹಕಾರ ಸಂಘಗಳು ಅನೇಕ ಅಕ್ರಮಗಳನ್ನು ಮಾಡಿದ್ದಾರೆಂದು ವಿವಿಧ ಸಮಿತಿಗಳಿಂದ ವರದಿಗಳು ಬಂದವು. ಜಿ.ವಿ.ಕೆ. ರಾವ್ ಸಮಿತಿಯ ವರದಿ ಬಂತು. ನಂತರ ಕೆ.ಎಚ್. ಪಾಟೀಲರು ಸಹಕಾರ ಮಂತ್ರಿಗಳಾಗಿದ್ದಾಗ ಸಹಕಾರ ಇಲಾಖೆಯ ಕಾರ್ಯದರ್ಶಿಗಳು ವರದಿಯನ್ನು ಕೊಟ್ಟು ಕೋಟ್ಯಾಂತರ ರೂಪಾಯಿಗಳು ಇದರಲ್ಲಿ ಮಧ್ಯವರ್ತಿಗಳ ಕೈಗೆ ಹೋಗಿದೆಯೆಂದು ಹೇಳಿದರು. ಇದೆಲ್ಲಾ ಬಂದಮೇಲೆ, ಎಲ್ಲಾ ಅಂಶಗಳನ್ನೂ ಪರಿಶೀಲಿಸಿ, ಎಷ್ಟು ಸಹಕಾರ ಸಂಘಗಳಿದ್ದರೂ ಅದರಲ್ಲಿ ಎಷ್ಟೇ ಜನ ಪ್ರಾಮಾಣಿಕ ಸದಸ್ಯರಿದ್ದರೂ ಅವರಿಗೆ ನೇಗ ನಿವೇಶನ ಕೊಡುವ ಉದ್ದೇಶದಿಂದಲೇ ಈ ತೀರ್ಮಾನವನ್ನು ಮಾಡಿದ್ದೇವೆ. ಇದಕ್ಕೆ ಒಂದು ಉನ್ನತಮಟ್ಟದ ಅಧಿಕಾರಿಗಳ ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿ ಈಗಾಗಲೇ ಕೆಲಸ ಶುರು ಮಾಡಿದೆ. ಪ್ರತಿಯೊಂದು ಸಹಕಾರ ಸಂಘದಲ್ಲೂ ಪ್ರಾಮಾಣಿಕವಾದ ಸದಸ್ಯರು ಯಾರಿದ್ದಾರೆ, ಅವರನ್ನು ಗುರುತು ಮಾಡಿ, ಅದೇ ಸಹಕಾರ ಸಂಘದಲ್ಲಿದ್ದಂಥ ಜಮೀನುಗಳಿಂದ ನಿವೇಶನಗಳನ್ನು ಅದ್ಯತೆಯ ಮೇಲೆ ಅವರ ವಶಕ್ಕೆ ಕೊಟ್ಟು ಹೆಚ್ಚು ನಿವೇಶನಗಳು ಉಳಿದರೆ, ಅವುಗಳನ್ನು ಬಿ.ಡಿ.ಎ. ಮುಖಾಂತರ, ಹಂಚುತ್ತೇವೆ. ಬಿ.ಡಿ.ಎ.ನಲ್ಲೂ ಕೂಡ ೮-೧೦ ಸಾರಿ

ಅರ್ಜಿ ಹಾಕಿದ ಎಷ್ಟೋ ಜನಕ್ಕೆ ನಿವೇಶನ ಸಿಕ್ಕಿಲ್ಲ. ಅವರಿಗೆ ಕೊಡುವ ಒಂದು ಯೋಜನೆಯಿಂದ, ಎಲ್ಲಾ ಸಹಕಾರ ಸಂಘಗಳನ್ನೂ ತೆಗೆದುಕೊಳ್ಳಬೇಕೆಂದು ಮಾಡಿದೆ. ಆದ್ದರಿಂದ ಈಗ ಪುನರ್ ಪರಿಶೀಲನೆ ಮಾಡುವಂತಹ ಸಂದರ್ಭ ಇಲ್ಲ. ಸರ್ಕಾರದವರು ಮಾಡಿರತಕ್ಕ ಒಂದು ನಿರ್ಧಾರದ ಜೊತೆಗೆ ಏನಾದರೂ ಸಲಹೆ ಸೂಚನೆಗಳು ಇದ್ದರೆ ತಾವು ಕೊಡಬಹುದು. ಇದನ್ನು ಇನ್ನೂ ಉತ್ತಮಪಡಿಸುವ ದೃಷ್ಟಿಯಿಂದ, ಅದನ್ನು ಸರ್ಕಾರ ಪರಿಶೀಲಿಸುತ್ತದೆ. ಈಗ ಬೆಂಗಳೂರು ನಗರದಲ್ಲಿ ಇದೊಂದು ರಾಕೆಟ್ ಆಗಿದೆ. ಮಧ್ಯವರ್ತಿ ಜನಗಳ ರಾಕೆಟ್‌ನ್ನು, ಅವರ ಕೈಯಿಂದ ತಪ್ಪಿಸುವ ಉದ್ದೇಶದಿಂದಲೇ ಇದನ್ನು ಮಾಡಲಾಗಿದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ

ದ. // <u>ನಿಯಮ ೩೩ಳರ ಮೇರೆಗೆ</u>

ವಿಷಯ:- ೧) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಖೆರ್ಡಾ(ಬಿ)ಗ್ರಾಮದಲ್ಲಿ ಶಾಲಾ ಕಟ್ಟಡದ ಕೆಲಸವನ್ನು ಪೂರ್ಣಗೊಳಿಸುವ ಬಗ್ಗೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):- ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯ ಔರಾದ್ ಮತಕ್ಷೇತ್ರದಲ್ಲಿ ಬರುವ ಖೆರ್ಡಾ(ಬಿ) ಗ್ರಾಮಕ್ಕೆ ಜಿಲ್ಲಾ ಪರಿಷತ್ತಿನಿಂದ ಒಂದು ಶಾಲಾ ಕಟ್ಟಡದ ನಿರ್ಮಾಣಕ್ಕಾಗಿ ಮಂಜೂರಾತಿ ದೊರತಿದ್ದು ಇದರ ಟೆಂಡರ್ ಸಹ ಆಗಿರುತ್ತದೆ. ನಿರ್ಮಾಣ ಕಾರ್ಯವನ್ನು ವಹಿಸಿಕೊಂಡಿರುವ ಗುತ್ತಿಗೆದಾರರು ನಿರ್ಮಾಣಕ್ಕೆ ಮುಂಚೆಯೇ ಹಣವನ್ನು ತೆಗೆದುಕೊಂಡಿದ್ದು, ನಿರ್ಮಾಣದ ಕೆಲಸವನ್ನೇ ಪ್ರಾರಂಭಿಸಿರುವುದಿಲ್ಲ. ಕಳೆದ ೨ ವರ್ಷಗಳಿಂದ ಈ ನಿರ್ಮಾಣದ ಕೆಲಸವನ್ನೇ ಪ್ರಾರಂಭಿಸಿರುವುದಿಲ್ಲ, ಹಾಗೆಯೇ ನಿಂತಿದೆ. ಇದರಿಂದಾಗಿ ಇಲ್ಲಿನ ಶಾಲಾ ಮಕ್ಕಳಿಗೆ ಕಟ್ಟಡವಿಲ್ಲದೇ ಬಹಳ ತೊಂದರೆಯಾಗಿದೆ. ಈ ಗ್ರಾಮವು ಬಹಳ ಹಿಂದುಳಿದ ಗ್ರಾಮವಾಗಿದ್ದು ಮಹಾರಾಷ್ಟ್ರ ಜಿಲ್ಲೆಯ ಗಡಿಯ ಸಮೀಪದಲ್ಲಿದೆ. ಆದ್ದರಿಂದ ಈ ಶಾಲಾ ಕಟ್ಟಡದ ನಿರ್ಮಾಣದ ಕೆಲಸವನ್ನು ಕೂಡಲೆ ಪ್ರಾರಂಭಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಲೋಕೋಪಯೋಗಿ ಸಚಿವರನ್ನು ಏನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ೪೦ ಜನ ಮಂತ್ರಿಗಳಾದರೂ ಸಮಯಕ್ಕೆ ಸರಿಯಾದ ಉತ್ತರ ಇಲ್ಲ. ೪೦ ಜನರಲ್ಲಿ ೧೦ ಜನರಾದರೂ ಇಲ್ಲಿ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಗೈರು ಹಾಜರಿದ್ದವರನ್ನು ತೆಗೆದು ಬೇರೆಯವರನ್ನು ಮಾಡುವುದಕ್ಕೆ ಬರುತ್ತದಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮುಂದಿನ ಪ್ರಶ್ನೆ ತೆಗೆದುಕೊಳ್ಳಬಹುದು. ಮುಂದಿನ ಪ್ರಶ್ನೆಯಾದ ತಕ್ಷಣ ಇದಕ್ಕೆ ಉತ್ತರ ಹೇಳುತ್ತೇನೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ಈ ರೀತಿಯ ಅಶಿಸ್ತು ಇರುವುದು ಸರಿಯಲ್ಲ. ತಾವು ಸರ್ಕಾರಕ್ಕೆ ಸೂಕ್ತವಾದ ನಿರ್ದೇಶನ ಕೊಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಸರ್ಕಾರಕ್ಕೆ ಏನು ತೊಂದರೆ ಇದೆ ಎಂಬುದೇ ಅರ್ಥವಾಗಲಿಲ್ಲ. ೪೧ ಜನ ಮಂತ್ರಿಗಳು ಇದ್ದಾರೆ. ಇಂತಹ ತೊಂದರೆ ಏಕೆ ಬಂತು?

೨) ಹಾಸನದಲ್ಲಿರುವ ವಿಭಜಿತ ಬಾಲಕಿಯರ ಪ್ರೌಢ ಶಾಲಾ ಕಟ್ಟಡದ ದುರಸ್ತಿ.